ಸಿಸಿ ನಂಃ 2671/2021
ಸಿ.ಡ್ಬ್ಲ್ಯೂ 9/ಪಿ.ಡಬ್ಲ್ಯೂ 6

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2671/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗಂಗಪ್ಪ ಕೊರವರ |
| ತಂದೆಯ ಹೆಸರು | ಃ | ಬಳ್ಳೆಪ್ಪ (ಹನುಮಂತಪ್ಪ ) |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಮೋಡ್ಕಾ ವ್ಯಾಪಾರ |
| ವಾಸ ಸ್ಥಳ | ಃ | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 19-01-2024

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಪೋಲಿಸರು ನನಗೆ ಯಾವುದೇ ಆರೋಪಿತರನ್ನು ತೋರಿಸಿಲ್ಲ ಮತ್ತು ನನ್ನ ಸಮಕ್ಷಮ ಎನು ಮಾಡಿಲ್ಲ . ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಮತ್ತು ವಿಸಿ ಮೂಲಕ ನೋಡುತ್ತಿರುವ ಆರೋಪಿತನನ್ನು ನಾನು ಈ ಮೊದಲು ನೋಡಿಲ್ಲ . ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ . ಪೋಲಿಸರು ನನಗೆ ಗಾಂಧಿನಗರದ ಒಂದು ಸ್ಥಳದಲ್ಲಿ ನಿಲ್ಲಿಸಿ ಪೋಟೋ ತೆಗೆಸಿದ್ದರು . ಅವುಗಳನ್ನು ನಾನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ-ಪಿ-7 ಮತ್ತು 8 ರ ಪೋಟೋಗಳಾಗಿವೆ . ಅವುಗಳನ್ನು ಯಾವ ಕಾರಣಕ್ಕೆ ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ನಂತರ ನಾನು ಕೆಲಸ ಮಾಡುವ ಸ್ಥಳಕ್ಕೆ ಪೋಲಿಸರು ಬಂದು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದರು . ಅದನ್ನು ಈಗ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಗಾಲೇ ನಿಶಾನೆ-ಪಿ-9 ಎಂದು ಗುರುತಿಸಲಾಗಿದ್ದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-9 (ಬಿ) ಎಂದು ಗುರುತಿಸಲಾಯಿತು . ಸದರಿ ನನ್ನ ಸಹಿ ಯಾವ ಕಾರಣಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ ಮತ್ತು ಸದರಿ ದಾಖಲೆಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ .

ಸಿಸಿ ನಂಃ 2671/2021
ಸಿ.ಡ್ಯ್ಲೂ 9/ಪಿ.ಡಬ್ಲ್ಯೂ 6

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 04-02-2021 ರಂದು ಸಾಃ 6.15 ರಿಂದ 7.00 ಗಂಟೆಯವರೆಗೆ ಪೋಲಿಸರು ನನ್ನ ಮತ್ತು ಚಾಸಾ-8 ರವರ ಸಮಕ್ಷಮ ಧಾರವಾಡ ಸತ್ತೂರು ಉದಯಗಿರಿ ಡಬಲ್ ರೋಡಿನ , ವನಶ್ರೀ ನಗರದ 58 ನೇ ಮುಖ್ಯ ರಸ್ತೆಯಲ್ಲಿ ನೀರಲಕಟ್ಟಿ ರವರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿ ನಂಃ 1 ಮತ್ತು 2 ತಾವು ಸದರಿ ಸ್ಥಳದಿಂದ ಒಬ್ಬ ಮಹಿಳೆಯ ಕೊರಳಲ್ಲಿದ್ದ ಬಂಗಾರದ ಚೈನನ್ನು ದೋಚಿಕೊಂಡು ಹೋಗಿದ್ದೆವೆ ಎಂದು ಸ್ಥಳ ತೊರಿಸಿದಂತೆ ಪೋಲಿಸರು ನಮ್ಮ ಸಮಕ್ಷಮ ನಿಶಾನೆ-ಪಿ-9 ರಂತೆ ಪಂಚನಾಮೆ ಮಾಡಿ , ನಿಶಾನೆ-ಪಿ-7 ಮತ್ತು 8 ರ ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ . ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲು ಃ ಆರೋಪಿ ಪರ ವಕೀಲರು ಪಾಟೀಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.